# ಸಾವಿರ ಕಂಬಗಳಾಗೋಣ

## ಅ) ಬಿಟ್ಟಸ್ಥಳ ತುಂಬಿರಿ.

೧. ಭಾರತ ಮಾತೆಯ ಮಂದಿರಕೆ **ಸಾವಿರ** ಕಂಬಗಳಾಗೋಣ..

೨. ಭರತ ಭೂಮಿಯ **ರಕ್ಷಣೆಗೆ** ಕೋಟಿ ಸೈನಿಕರಾಗೋಣ.

೩. ಸ್ವಾಭಿಮಾನದ ಸಾರ್ಥಕ ಬದುಕಿನ **ಮಾನವತೆಯನ್ನು** ಮೆರೆಯೋಣ.

೪. ದ್ವೇಷ-ಅಸೂಯೆ ತೊರೆಯೋಣ **ಬಲಿಷ್ಠ** ಭಾರತ ಕಟ್ಟೋಣ.

## ಆ) ಪದಗಳ ಅರ್ಥ ಬರೆಯಿರಿ.

ರಕ್ಷಣೆ = ಕಾಪಾಡುವಿಕೆ, ಸಂರಕ್ಷಿಸುವಿಕೆ

ಸಾರ್ಥಕ = ಸಫಲವಾದುದು

ಸಮತೆ = ಸಮಾನತೆ, ಸಾದೃಶ್ಯ

ಬಿತ್ತೋಣ = ಬೀಜ ಹಾಕೋಣ

ಬಲಿಷ್ಠ = ಬಲಶಾಲಿ, ಶಕ್ತಿವಂತ

ಸೈನಿಕ = ಯೋಧ, ಭಟ

ವೈವಿಧ್ಯ = ವಿವಿಧತೆ

ಮಮತೆ = ಮಮಕಾರ, ಪ್ರೀತಿ

ತೊರೆ = ಬಿಡು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಇ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ.

ವಿಶ್ವ ಜೀವನವೆ ……………………………………………………

…………………………………………………… ಹೃದಯಿಗಳಾಗೋಣ

ಎಲ್ಲ ದೇಶಕು ……………………………………………………

…………………………………………………… ಹಂಚೋಣ

## ಈ) ಒಂದು ವಾಕ್ಯದಲ್ಲಿ ಉತ್ತರಿಸಿರಿ.

### ೧. ನಾವು ಯಾವಾಗ ವಿಶಾಲ ಹೃದಯಿಗಳಾಗುತ್ತೇವೆ?

ಉ: ನಾವು ವಿಶ್ವ ಜೀವನ ನಮ್ಮ ಜೀವನವು ಎಂದುಕೊಂಡಾಗ ವಿಶಾಲ

ಹೃದಯಿಗಳಾಗುತ್ತೇವೆ.

೨. ಎಲ್ಲ ದೇಶಕು, ಎಲ್ಲ ಕಾಲಕು ಏನನ್ನು ಹಂಚಬೇಕು?

ಉ:ಎಲ್ಲ ದೇಶಕು, ಎಲ್ಲ ಕಾಲಕು ಸಾಧನೆ, ಸಫಲತೆ ಹಂಚಬೇಕು.

೩. ನಾವು ಯಾವ ಬಗೆಯ ರಾಷ್ಟ್ರವನ್ನು ಕಟ್ಟಬೇಕು?

ಉ: ನಾವು ಒಂದೇ ಮನದ ಒಂದೇ ಧ್ವನಿಯ ರಾಷ್ಟ್ರವನ್ನು ಕಟ್ಟಬೇಕು.

೪. ವೈವಿಧ್ಯವನ್ನು ಯಾವ ರೀತಿ ಬೆಳೆಸಬೇಕು?

ಉ: ವೈವಿಧ್ಯವನ್ನು ಬಗೆಬಗೆ ಬಣ್ಣದ ಹೂದಳದಂತೆ ಬೆಳೆಸಬೇಕು.

೫. ನಾವು ಏನನ್ನು ಬೆಳಗಬೇಕು?

ಉ: ನಾವು ಸಮತೆಯ ದೀಪ ಬೆಳಗಬೇಕು.

ಉ) ಎರಡು - ಮೂರು ವಾಕ್ಯಗಳಲ್ಲಿ ಬರೆಯಿರಿ.

೧. ನಾವು ಭಾರತ ಮಾತೆಯ ಮಂದಿರದಲ್ಲಿ ಹೇಗೆ ವಿಶಾಲ ಹೃದಯಿಗಳಾಗಿ ಬಾಳಬೇಕು?

ಉ: ನಾವು ಭಾರತ ಮಾತೆಯ ಮಂದಿರಕ್ಕೆ ಸಾವಿರ ಕಂಬಗಳಾಗಿ, ಭರತ ಭೂಮಿಯ ರಕ್ಷಣೆಗೆ ಸೈನಿಕರಾಗಬೇಕು. ವಿಶ್ವ ಜೀವನವು ನಮ್ಮ ಜೀವನವಾಗಿ ವಿಶಾಲ ಹೃದಯಿಗಳಾಗಿ ಬಾಳಬೇಕು?

೨. ಪ್ರಸ್ತುತ ಪದ್ಯದಲ್ಲಿ ನಿಮಗಿಷ್ಟವಾದ ವಿಚಾರವನ್ನು ಮೂರು ವಾಕ್ಯಗಳಲ್ಲಿ ಬರೆಯಿರಿ.

ಉ: ಎಲ್ಲ ದೇಶಕ್ಕೆ ಎಲ್ಲ ಕಾಲಕ್ಕೆ ನಮ್ಮ ಸಾಧನೆ, ಸಫಲತೆ ಹಂಚಬೇಕು. ಬಗೆಬಗೆ ಬಣ್ಣದ ಹೂದಳದಂತೆ ವೈವಿಧ್ಯವನ್ನು ಬೆಳೆಸಬೇಕು. ಒಂದೇ ಮನದ ಒಂದೇ ಧ್ವನಿಯಲ್ಲಿ ರಾಷ್ಟ್ರವನ್ನು ಕಟ್ಟಬೇಕು.

ಊ) ಸ್ವಂತ ವಾಕ್ಯದಲ್ಲಿ ಬರೆಯಿರಿ.

೧. ಸಾಧನೆ: ನಾನು ಚೆನ್ನಾಗಿ ಓದಿ ಸಾಧನೆ ಮಾಡಬೇಕು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೨. ಮಮತೆ: ತಾಯಿಯ ಮಮತೆ ಯಾವಾಗಲೂ ನಿರಂತರ.

೩. ಸ್ವಾಭಿಮಾನ : ನಮಗೆ ಸ್ವಾಭಿಮಾನ ಇರಬೇಕು.

೪. ದೀಪ : ನಾನು ದಿನ ಸಂಜೆ ದೀಪ ಹಚ್ಚುತ್ತೇನೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ